# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1385 |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 20-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಹಾಗೂ ಬಿಬಿಎಂಪಿ ವ್ಯಾಪ್ತಿಗೆ ಬರುವ ರಸ್ತೆಗಳು ಯಾವುವು; (ಪೂರ್ಣ ವಿವರ ಒದಗಿಸುವುದು). | • ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ವಿವರ **ಅನುಬಂಧ-1** ರಲ್ಲಿ ಒದಗಿಸಿದೆ. ಸದರಿ ರಸ್ತೆಗಳನ್ನು ಹೈಡೆನ್ಸಿಟಿ ಕಾರಿಡಾರ್‌ಗಳಾಗಿ ಪರಿಗಣಿಸಲಾಗಿರುತ್ತದೆ. ಇದರ ಉದ್ದ ಸುಮಾರು 77.64 ಕಿ.ಮೀ ಗಳಾಗಿರುತ್ತದೆ.<br>• ಉಳಿದಂತೆ ಹಿಂದಿನ ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳು ಮಾರ್ಪಟು ಆಗಿದ್ದು, ಸದರಿ ರಸ್ತೆಗಳನ್ನು ಪ್ರಸ್ತುತ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆ ಎಂದು ನಾಮಕರಣ ಮಾಡಲಾಗಿರುತ್ತದೆ. ಇದರ ಉದ್ದ ಸುಮಾರು1,604.46 ಕಿ.ಮೀ ಗಳಾಗಿರುತ್ತದೆ.<br>• ಉಳಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ವಾರ್ಡ್ ರಸ್ತೆಗಳಿದ್ದು, ಇದರ ಉದ್ದ ಸುಮಾರು 11,196.79 ಕಿ.ಮೀ ಗಳಾಗಿರುತ್ತದೆ. |
| ಆ) | ಸದರಿ ರಸ್ತೆಗಳು ಹಾಳಾಗಿದ್ದು, ಇಲ್ಲಿಯವರೆಗೂ ಎಷ್ಟು ರಸ್ತೆಗಳನ್ನು ದುರಸ್ಥಿ ಪಡಿಸಲಾಗಿದೆ; (ವಿವರ ಒದಗಿಸುವುದು) | **ಅನುಬಂಧ-2 ರಲ್ಲಿ ಒದಗಿಸಿದೆ.** |
| ಇ) | ಇಲ್ಲಿಯವರೆಗೂ ದುರಸ್ಥಿ ಕಾರ್ಯ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ರಸ್ತೆಗಳ ದುರಸ್ಥಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | |
| ಈ) | ದಿನಾಂಕ:01-06-2023 ರಿಂದ ಇಲ್ಲಿಯವರೆಗೆ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು) | • ರಸ್ತೆ ಅಭಿವೃದ್ಧಿಗಾಗಿ ವೈಟ್ ಟಾಪಿಂಗ್ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಈ ಯೋಜನೆಯಲ್ಲಿ ರಸ್ತೆ ಹಾಗೂ ರಸ್ತೆ ಬದಿಯ ಚರಂಡಿಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳು ಸೇರಿದ್ದು, ಸದರಿ ಯೋಜನಾ ವೆಚ್ಚ ರೂ.2000.00 ಕೋಟಿಗಳಾಗಿರುತ್ತದೆ.<br>• ಬಿಬಿಎಂಪಿ ವ್ಯಾಪ್ತಿಯ 10 ವಿಧಾನಸಭಾ ಕ್ಷೇತ್ರಗಳಿಗೆ ತಲಾ ರೂ.25.00 ಕೋಟಿಗಳಂತೆ ರೂ.250.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.<br>• ಬಿಬಿಎಂಪಿ ವ್ಯಾಪ್ತಿಯ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳ ರಸ್ತೆ ಗುಂಡಿ ಮುಚ್ಚಲು ರೂ.4.75 ಕೋಟಿ ಮತ್ತು 389.68ಕಿ.ಮೀ ಉದ್ದದ ರಸ್ತೆಗಳಿಗೆ ಡಾಂಬರೀಕರಣ ಮಾಡಲು ರೂ.694.00 ಕೋಟಿಗಳಿಗೆ ಅನುಮೋದನೆ ನೀಡಿದೆ.<br>• 2024-25ನೇ ಸಾಲಿನಲ್ಲಿ ಪ್ರತಿ ವಾರ್ಡ್‌ಗೆ ರೂ.200.00 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ರೂ.15.00 ಲಕ್ಷಗಳನ್ನು ಪ್ರತಿ ವಾರ್ಡ್‌ನಲ್ಲಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳಿಗೆ ಬಳಸಲು ಸೂಚಿಸಲಾಗಿದೆ. |

**ನಅಇ 174 ಎಂಎನ್‌ವೈ 2025**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

# ANNEXURE – 1

| Sl No | NH number, Origin and Destination | Chainage with in the city limits | Section of the alignment of NH with in the city | Length in Kms |
|---|---|---|---|---|
| 1 | 209, From Dindigal to Bengaluru road | 478 to 461.55 | Bengaluru GPO – Corporation circle – KR Market – VV Puram circle – Vani Vilas park road – old kanakapura road – yediyur – Banashankari – Sarakki circle – Metri Cast & Carry – Yellamma Dassappa – Thalghattapura – Nice road junction | 16.45 |
| 2 | 275, From Bantawala to Bangalore section | 342 to 359.937 | Nice junction at Kengeri – RV Engineering college – Nayanadanahalli – Haleguddadahalli – K.R.Market – Townhall – Corporation – NT Road – KR circle – GPO | 17.937 |
| 3 | 4, Bangalore to Pune Section | 0.00 to 9.80 | GPO – Rajbhavan road – Bsva bhavn road – BDA road – Sanky road – BHEL circle – Yeshwanthapura police station – APMC yard – Goraguntepalya | 9.80 |
| | Madras Kolar to Bangalore Section | 318.00 to 302.20 | GPO – MG Road – Ulsoor Lake – Indranagar – Old ITI – KR Pura + KRPuram lake – Battarahalli | 15.80 |
| 4 | 7, Hyderabad to Bengaluru section | 556.84 to 547.84 | GPO – Rajbhavan road – Bsva bhavn road – BDA road – Sanky road – Mekhri circle – Hebbal Flyover | 9.00 |
| | Bangalore to Kanyakumari | 556.84 to 565.49 | GPO – MG Road – Shoolay circle – Old Adugodi road – Central silk board | 8.65 |
| | | | | |
| | | | **Total Length** | **77.64** |
| | | | **Rounded Off** | |

## ಅನುಬಂಧ-2

- ರಸ್ತೆಗಳ ಶಾಶ್ವತ ದುರಸ್ಥಿಗಾಗಿ ಸುಮಾರು 196 ಕಿ.ಮೀ ನಷ್ಟು ವೈಟ್ ಟಾಪಿಂಗ್, ಸುಮಾರು 58 ಕಿಮೀನಷ್ಟು ಟೆಂಡರ್‌ಶ್ಯೂರ್ ಮತ್ತು ಸ್ಮಾರ್ಟ್ ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಿದ್ದು, ಈ ರಸ್ತೆಗಳು ಶಾಶ್ವತವಾಗಿ ಉತ್ತಮ ದರ್ಜೆಯ ರಸ್ತೆಗಳಾಗಿರುತ್ತದೆ.

- ಉಳಿದಂತೆ ಸುಮಾರು 12,624.89ಕಿ.ಮೀ ಹಾಳಾದ ರಸ್ತೆಗಳನ್ನು ಅಗತ್ಯತೆ ಮತ್ತು ಅನುದಾನದ ಅನುಗುಣವಾಗಿ ದುರಸ್ಥಿ ಮತ್ತು ಡಾಂಬರೀಕರಣವನ್ನು ಮಾಡಲಾಗುತ್ತಿರುತ್ತದೆ.

- ರಸ್ತೆ ಅಗೆತದಿಂದ ಆಗುವ ರಸ್ತೆ ಗುಂಡಿಗಳನ್ನು ಆಯಾ ಸಂಸ್ಥೆಗಳೇ ಅಂದರೆ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್‌ಗ್ಯಾಸ್ ರವರುಗಳೇ ಮುಚ್ಚುವಂತೆ ಆದೇಶ ನೀಡಲಾಗಿದೆ.

- ರಸ್ತೆ ಅಗೆತವನ್ನು ತಡೆಗಟ್ಟಲು ಪ್ರಮುಖ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿಯ ಜೊತೆಗೆ ಡಕ್ಟ್‌ಗಳ ನಿರ್ಮಾಣವನ್ನು ಕೈಗೊಳ್ಳಲಾಗಿದೆ.

- ರಸ್ತೆ ಗುಂಡಿಗಳನ್ನು ಪಾರದರ್ಶಕವಾಗಿ ಗುರುತಿಸಲು ಮತ್ತು ದುರಸ್ಥಿ ಪಡಿಸಲು ಹಾಗೂ ನಿಗಧಿತ ಅವಧಿಯಲ್ಲಿ ರಸ್ತೆ ಗುಂಡಿ ಮುಚ್ಚಲಾದ ಕಾರ್ಯವಿಧಾನದ ಬಗ್ಗೆ ನಿಗಾ ವಹಿಸಲು "ರಸ್ತೆ ಗುಂಡಿ ಗಮನ" ಎಂಬ ಮೊಬೈಲ್ ಆಪ್ ಅನ್ನು ಅಭಿವೃದ್ಧಿಗೊಳಿಸಲಾಗಿದೆ.

- ಬೆಂಗಳೂರು ನಗರದ ಬ್ರ್ಯಾಂಡ್ ಬೆಂಗಳೂರು ಸುಗಮ ಸಂಚಾರ ಅಡಿಯಲ್ಲಿ "ಕಡಿಮೆ ನಿರ್ವಹಣಾ ವೆಚ್ಚದ ಮತ್ತು ಧೀರ್ಘಾವಧಿ ಬಾಳಿಕೆಯ ವೈಟ್ ಟಾಪಿಂಗ್ ರಸ್ತೆಗಳನ್ನು" ನಿರ್ಮಿಸಲು ಸರ್ಕಾರದಿಂದ ರೂ.800.00 ಕೋಟಿಗಳನ್ನು ಒದಗಿಸಲಾಗಿದ್ದು, ಸದರಿ ಯೋಜನೆಯಡಿಯಲ್ಲಿ 67 ಕಿ.ಮೀ ಉದ್ದ ವೈಟ್‌ಟಾಪಿಂಗ್ ಕಾಮಗಾರಿ ನಿರ್ವಹಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಕಾರ್ಯಾದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

- ಹೆಚ್ಚುವರಿಯಾಗಿ ಬ್ರ್ಯಾಂಡ್ ಬೆಂಗಳೂರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ 2023-24, 2024-25 ಮತ್ತು 2025-26ರಲ್ಲಿ ಆಸ್ತಿ ತೆರಿಗೆಯಿಂದ ಸಂಗ್ರಹಣೆಯಾಗುವ ಹೆಚ್ಚುವರಿ ತೆರಿಗೆ ಮೊತ್ತದಲ್ಲಿ ರೂ.900.00 ಕೋಟಿಗಳಲ್ಲಿ 84 ಕಿ.ಮೀ ಉದ್ದದ ಆರ್ಟಿರಿಯಲ್, ಸಬ್-ಆರ್ಟಿರಿಯಲ್ ಮತ್ತು ಪ್ರಮುಖ ರಸ್ತೆಗಳಿಗೆ ವೈಟ್‌ಟಾಪಿಂಗ್ ಒದಗಿಸುವ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಕಾರ್ಯಾದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

*****